ಶ್ರೀ ಎಸ್.ಎಸ್. ಪಾಟೀಲ್ : ಮಾಯ ಮಾಡುತ್ತೀರಾ?

ಶ್ರೀ ಸಿ. ಗುರುಸ್ವಾಮಿ : ಒಂದು ತಿಂಗಳಲ್ಲಿ ಎಲ್ಲಾ ನೌಕರರನ್ನು ಭರ್ತಿ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನನಗೂ ಕೂಡ ನಂಬಿಕೆ ಇದೆ. ಬಹಳ ಸಂತೋಷ, ಆ ಆಸ್ಪತ್ರೆಗೆ ಹೊಸದಾಗಿ ಸ್ಕ್ಯಾನಿಂಗ್ ಮಿಷನ್ನನ್ನು ತಂದು ಹಾಕಿದ್ದಾರೆ. ಅದು ರನ್ನಿಂಗ್‌ನಲ್ಲಿ ಇದೆ, ನಾನು ಕೆಟ್ಟಿದೆ ಎಂದೂ ಹೇಳಿಲ್ಲ. ಟ್ರೈನಿಂಗ್ ಕೊಟ್ಟಿರುವಂತಹದ್ದು ತಾವು ಹೇಳುತ್ತೀರಿ, ಡಾ: ಪುಷ್ಪ ಮತ್ತು ಕೃಷ್ಣಸ್ವಾಮಿ ಅವರುಗಳಿಗೆ ಒಂದು ವಾರಗಳ ಕಾಲ ತರಬೇತಿ ಕೊಟ್ಟಿದ್ದೇವೆಂದು ಹೇಳುತ್ತೀರಿ. ಅವರು ಡಾಕ್ಟರ್ಸ್ ಮಾನ್ಯ ಅಧ್ಯಕ್ಷರೆ ಅದನ್ನು ಖಂಡಿತವಾಗಿಯೂ ಅಪರೇಟ್ ಮಾಡುತ್ತಿಲ್ಲ, ಅದರಿಂದಾಗಿ ಜನರಿಗೆ ಉಪಯೋಗವಾಗುತ್ತಿಲ್ಲ. ಸಾಲದಕ್ಕಾದರೂ ಪ್ರೈವೇಟ್‌ನಲ್ಲಾದರೂ ಅಲ್ಟಾ ಸ್ಕ್ಯಾನಿಂಗ್ ಇದ್ದರೆ ಹೋಗಿ ಕಷ್ಟಬಿದ್ದು ಮಾಡಿಸಬಹುದು. ಇದನ್ನು ಮಾಡಿಸುವುದಕ್ಕಾಗಿ ಮೈಸೂರಿಗೆ ಹೋಗಬೇಕಾಗುತ್ತದೆ. ತುರ್ತಾಗಿ ಮತ್ತು ತಾತ್ಕಾಲಿಕವಾಗಿ ಇದನ್ನು ಅಪರೇಟ್ ಮಾಡುವುದಕ್ಕಾಗಿ ನೀವು ನೇಮಕಾತಿ ಮಾಡುವವರೆಗೆ ಯಾರನ್ನಾದರೂ ನೇಮಕ ಮಾಡಿದರೆ ಬಡವರು ಮತ್ತು ನಾವು ನೆನಸಿಕೊಳ್ಳುತ್ತೇವೆ. ಡಾಕ್ಟರ್ ಅಂತೂ ಖಂಡಿತವಾಗಿಯೂ ಆ ಕೆಲಸ ಮಾಡುವುದಿಲ್ಲ. ಅವರು ಬರೆದು ಬರೆದು ಕಳುಹಿಸುತ್ತಿರುತ್ತಾರೆ. ಇದಕ್ಕೆ

4.50 ಪಿಎಂ

ನಾನಾ ರೀತಿಯ ಕಾರಣಗಳಿವೆ, ಇರುವ ಒಂದು ಮೆಷಿನ್ ಆಪರೇಟ್ ಮಾಡಲು ದಯಮಾಡಿ ಯಾರನ್ನಾದರೂ ಡೆಪ್ಯುಟೇಷನ್ ಮೇಲೆ ಕಳುಹಿಸುವ ತಾತ್ಕಾಲಿಕ ವ್ಯವಸ್ಥೆಯನ್ನಾದರೂ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಅದರ ಬಗ್ಗೆ ವ್ಯವಸ್ಥೆಯನ್ನು ಮಾಡುತ್ತೇವೆ.

ಭಾರತೀಯ ವೈದ್ಯಕೀಯ ಪದ್ಧತಿಗಳನ್ನು ಜನಪ್ರಿಯಗೊಳಿಸುವ ಬಗ್ಗೆ

532 (4753) : ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಟೆಲಿಮೆಡಿಸಿನ್ ಹೋಮಿಯೋಪತಿ, ನ್ಯಾಚುರೋಪತಿ ಮುಂತಾದ ವಿಭಿನ್ನ ವೈದ್ಯಕೀಯ ಪದ್ಧತಿಗಳನ್ನು ಜನಪ್ರಿಯಗೊಳಿಸುವ ಇಚ್ಛೆ ಸರ್ಕಾರಕ್ಕೆ ಇದೆಯೇ;

ಆ) ಹೌದಾದರೆ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಈ ವೈದ್ಯಕೀಯ ಪದ್ಧತಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಯಾವಾಗ ಜಾರಿಗೊಳಿಸಲಾಗುವುದು?

ಶ್ರೀಮತಿ ನಫೀಸ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು):

ಅ) ಇದೆ.

ಆ) ಅಲೋಪತಿ ವೈದ್ಯ ಪದ್ಧತಿಯಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಭಾರತೀಯ ವೈದ್ಯ ಪದ್ಧತಿಯಲ್ಲೂ ಸಹ ಅಳವಡಿಸಲು ಪರಿಶೀಲಿಸಲಾಗುವುದು.

ಇ) ಹಂತ ಹಂತವಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎ.ಎಸ್. ಗುರುಸ್ವಾಮಿ : ಈ ಪ್ರಶ್ನೆಯನ್ನು ಕೇಳತಕ್ಕ ಹಿನ್ನೆಲೆಯೇನೆಂದರೆ, ಹೊರದೇಶಗಳಲ್ಲಿ ಹೋಮಿಯೋಪತಿ, ನ್ಯಾಚುರೋಪತಿ, ಆಯುರ್ವೇದಿಕ್ ಸಿಸ್ಟಮ್ ಬಗ್ಗೆ ಬಹಳ ಒಲವು ಇದೆ.

ಲಂಡನ್, ನ್ಯೂಯಾರ್ಕ್ ದೇಶಗಳಿಗೆ ಹೋಗಿ ನೋಡಿದಾಗ ಮೆಡಿಕಲ್ ಶಾಪ್ ಮುಂದೆ ಬೋರ್ಡ್ ಹಾಕಿದ್ದಾರೆ, Naturopathy treatment is given, Avurvedic medicines are given. ಎಂದು. ಹಾಗಾಗಿ ಲಂಡನ್ ಸ್ಟ್ರೀಟ್, ನ್ಯೂಯಾರ್ಕ್‌ಗಳಲ್ಲಿ ಈ ಮೆಡಿಸಿನ್ಸ್ ಪ್ರಸಿದ್ಧಿಯಾಗಿದೆ, ನಮ್ಮ ದೇಶದಲ್ಲಿ ಹುಟ್ಟಿರುವ ಈ ಮೆಡಿಸನ್ಸ್ ಪದ್ಧತಿ ಇಲ್ಲಿ ಪ್ರಸಿದ್ಧಿಯಾಗದೆ ಹೋಗಿದೆ ಎಂದು ನೊಂದು ಬೇಜಾರಿನಿಂದ ಈ ಪ್ರಶ್ನೆಯನ್ನು ಹಾಕಿದ್ದೇನೆ. come what may, old is gold. ನಮ್ಮ ಮೆಡಿಕಲ್ ಸಿಸ್ಟಂ ಒಳ್ಳೆಯ ಗೋಲ್ಡ್ ಇದ್ದ ಹಾಗೆ ಇದೆ, ಇದನ್ನು ನೆಗ್ಲೆಕ್ಟ್ ಮಾಡಿದ್ದಾರೆ. ಇದನ್ನು ಬಹಳ ಸೀರಿಯಸ್ ಆಗಿ ಜಾರಿಗೆ ತರಬೇಕು ಎಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳುತ್ತೇನೆ. ಈ ಸಚಿವರು, ಅವರು ವೈದ್ಯಕೀಯ ಶಿಕ್ಷಣದ ಮಂತ್ರಿಗಳಾಗಿದ್ದ ಅವಧಿಯಲ್ಲಿ ಮೈಸೂರಿಗೆ ಹೋಗಿ ಟೆಲಿ ಮೆಡಿಸಿನ್ ಬ್ರಾಂಚನ್ನು ಕೆ.ಆರ್. ಆಸ್ಪತ್ರೆಯಲ್ಲಿ ಉದ್ಘಾಟನೆ ಮಾಡಿದರು, ನಂತರ ಆ ಬಗ್ಗೆ ಏನೂ ಕಾರ್ಯ ನಡೆಯುತ್ತಿಲ್ಲ, ಆ ಮೆಡಿಷನ್ ಬ್ರಾಂಚ್ ಸಹ ಇಲ್ಲ ಯಾರೂ ಇಲ್ಲ. ಆ ಇಲಾಖೆ ಕೂಡ ಇಲ್ಲ, ಹೀಗೆ ಏಕೆ ಮಾಡುತ್ತಿದ್ದಾರೆ? Telemedicine is nothing but, through satellite conduct examination and give guidance. ಇದನ್ನು ಏಕೆ ಆಯುರ್ವೇದಿಕ್ ಸಿಸ್ಟಮ್‌ಗೆ ತರಬಾರದು? ಅದನ್ನು ಜಾರಿಗೆ ತರಬೇಕೆಂದು ನಾನು ಅಗ್ರಹ ಮಾಡುತ್ತೇನೆ. ಎರಡನೆಯದಾಗಿ, ಇದರ ಬಗ್ಗೆ ಸರ್ಕಾರದ ವತಿಯಿಂದ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವುದನ್ನು ಹೇಳಬೇಕು ಮತ್ತು ಕೊಟೈಕಲ್ ಅಂಥ ಫಾರ್ಮಸಿ ಏನಿದೆ ಅಲ್ಲಿಂದ ಹೊರದೇಶಗಳಿಗೆ ಬೇಕಾದಷ್ಟು ಸಿಸ್ಟಂಗಳನ್ನು ರಫ್ತು ಮಾಡುತ್ತಿದ್ದಾರೆ, ಆ ಬಗ್ಗೆ ಅವರು ವಿಚಾರ ಮಾಡುವ ವ್ಯವಸ್ಥೆ ಮಾಡಿಲ್ಲ ನಮ್ಮೂರಿನ ನೀಮ್ ಟ್ರೀ, ಈರುಳ್ಳಿ, ಬೆಳ್ಳುಳ್ಳಿ ಅಲ್ಲಿ ಫೇಮಸ್, ಕೋಲಾರದಲ್ಲಿ ಅರಿಶಿನ ಬೆಳೆಯುತ್ತಾರೆ, ಅದು ಇಲ್ಲಿ ಫೇಮಸ್ ಆಗಿಲ್ಲ, ಅಲ್ಲಿ ಫೇಮಸ್ ಆಗಿದೆ. ಅಲ್ಲಿ ಅದನ್ನು ಉಪಯೋಗಿಸುತ್ತಾರೆ, ನಮ್ಮಲ್ಲಿ ಅದರ ಉಪಯೋಗವಿಲ್ಲ. ಇದರ ಬಗ್ಗೆ ಗಂಭೀರವಾಗಿ ಸರ್ಕಾರ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸಬೇಕು.

ಶ್ರೀಮತಿ ನಫೀಸ ಫಜಲ್ : ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ, ಆಯುರ್ವೇದಿಕ್ ಹಾಗೂ ಹೋಮಿಯೋಪತಿ ಮೆಡಿಸಿನ್ಸ್ ಇಂಗ್ಲೆಂಡ್‌ನಲ್ಲಿ ಬಹಳ ಪ್ರಸಿದ್ಧಿಯಾಗಿದೆ, ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಧ್ಯಕ್ಕೆ ಇರುವ 600 ಚಿಕಿತ್ಸಾಲಯಗಳು ಗ್ರಾಮೀಣ ಪ್ರದೇಶಗಳಲ್ಲಿವೆಯೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ತೋರುತ್ತದೆ. ಮತ್ತೆ 76 ತಾಲ್ಲೂಕು ಆಸ್ಪತ್ರೆಗಳು ಹಾಗೂ 20 ಜಿಲ್ಲಾ ಆಸ್ಪತ್ರೆಗಳನ್ನು ಬಡಜನರ ಸೇವೆ ಮಾಡಲಿಕ್ಕೆ ನಾವು ಪ್ರಾರಂಭ ಮಾಡಿದ್ದೇವೆ. ಇನ್ನು ಎರಡನೆಯದಾಗಿ ಅವರು ಹೇಳಿದಂತೆ ನಾನು ವೈದ್ಯಕೀಯ ಶಿಕ್ಷಣ ಮಂತ್ರಿಯಾಗಿದ್ದಾಗ ಕೆ.ಆರ್. ಆಸ್ಪತ್ರೆಯಲ್ಲಿ ಟೆಲಿಮೆಡಿಸಿನ್ ವ್ಯವಸ್ಥೆಯನ್ನು ಆರಂಭ ಮಾಡಿದ್ದೆನು. ಅದು ಮಾತ್ರ ನಿಜ, ನಾನು ಈಗ ತಾನೇ ಲಾಬಿಯಲ್ಲಿ ಕುಳಿತುಕೊಂಡು ಈ ವಿಷಯದ ಬಗ್ಗೆ ಡಿ.ಎಂ.ಇ ಹತ್ತಿರ ಕೇಳಿದೆ. ಅದಕ್ಕೆ ಅವರು ಇಂಟರ್‌ನೆಟ್ ಮೂಲಕ ವ್ಯವಸ್ಥೆ ಮಾಡಿದ್ದೇವೆ. ಈಗ ಪರ್ಮನೆಂಟ್ ಬೇಸಿಸ್ ಮೇಲೆ ಮಾಡಲಿಕ್ಕೆ ಇಸ್ರೋ ಜೊತೆಯಲ್ಲಿ ಮಾತನಾಡುತ್ತಿದ್ದೇವೆ. ಅವರು ಹೆಡ್ ಆಸ್ಪತ್ರೆಗಳನ್ನು (ಕೇಂದ್ರ ಆಸ್ಪತ್ರೆಗಳು) ಇಲ್ಲಿ ಮಾಡಲಿಕ್ಕೆ ಸಿದ್ದರಿದ್ದಾರೆ. ಮಾನ್ಯ ಗುರುಸ್ವಾಮಿಯವರು ಹೇಳಿದಂತೆ ಇದು ಸೆಟಲೈಟ್ ಮೂಲಕ ನಡೆಯಬೇಕು, ಆ ಬಗ್ಗೆ ಮಾತುಕತೆ ನಡೆಯುತ್ತಿದೆ. ಇದು ಯಶಸ್ವಿಯಾದ ಮೇಲೆ ನಾವು ಆಯುರ್ವೇದಿಕ್ ಪದ್ಧತಿಯಲ್ಲಿಯೂ ಪ್ರಾರಂಭ ಮಾಡುತ್ತೇವೆ. ಮತ್ತೆ ಮಾನ್ಯ ಸದಸ್ಯರಿಗೆ ನಾನು ಹೇಳಲಿಕ್ಕೆ ಇಚ್ಛಿಸುವುದೇನೆಂದರೆ 2003 ಮತ್ತು 2004ರ ಮುಂಗಡ

ಪತ್ರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ 25 ಜಿಲ್ಲಾ ಆಸ್ಪತ್ರೆಗಳಲ್ಲಿ, ಗ್ರಾಮೀಣ ಪ್ರದೇಶದ ಜನರ ಅನುಕೂಲಕ್ಕಾಗಿ ಟೆಲಿಮೆಡಿಸಿನ್ ಪ್ರಾರಂಭಿಸಲಾಗುವುದೆಂದು ಘೋಷಿಸಿದ್ದಾರೆ, ಈಗಾಗಲೇ ಕೋಲಾರ ಮತ್ತು ಚಾಮರಾಜನಗರದ ಜಿಲ್ಲಾ ಆಸ್ಪತ್ರೆಗಳಲ್ಲಿ ಆರಂಭಿಸಲಾಗಿದೆ. ಈ ಜಿಲ್ಲಾ ಆಸ್ಪತ್ರೆಗಳ ಸಹಾಯದಿಂದ ಭಾರತೀಯ ವೈದ್ಯಪದ್ಧತಿ ಚಿಕಿತ್ಸೆಗಳನ್ನು ಹಂತ ಹಂತವಾಗಿ ನಾವು ಆರಂಭ ಮಾಡುತ್ತೇವೆ. ಇದನ್ನು ಸೆಟಲೈಟ್ ಮೂಲಕ ಮಾಡುತ್ತಿಲ್ಲ, ಇಂಟರ್‌ನೆಟ್ ಮೂಲಕ ಸಧ್ಯಕ್ಕೆ ಮಾಡುತ್ತಿದ್ದೇವೆ. ಈ ರೀತಿಯ ವ್ಯವಸ್ಥೆಯನ್ನು ನಾವು ಭಾರತೀಯ ವೈದ್ಯಪದ್ಧತಿಯಲ್ಲಿ ಉಪಯೋಗಿಸುತ್ತಿದ್ದೇವೆ.

ಶ್ರೀ ಎ.ಎಸ್. ಗುರುಸ್ವಾಮಿ : ಇವರು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಿದ್ದಾರೆ, ಆದರೆ ಯಾವ ಟೈಮ್ ಬಾಂಡ್‌ನಲ್ಲಿ ಕಾರ್ಯಗತಗೊಳಿಸುತ್ತಾರೆ ಎಂಬ ಬಗ್ಗೆ ಭರವಸೆ ಅವರಿಂದ ಬರಬೇಕು. ಈ ಎಲ್ಲಾ ಪದ್ಧತಿಗಳು ಬರೇ ಬೋರ್ಡ್‌ನಲ್ಲಿ ಇದೆ; ಪ್ರಾಕ್ಟೀಸ್‌ನಲ್ಲಿಲ್ಲ, ಹೋಮಿಯೋಪತಿ ಆಸ್ಪತ್ರೆ ಎಂದು ಬೋರ್ಡ್‌ಗಳಿವೆ. ಆದರೆ ಅಲ್ಲಿ ಡಾಕ್ಟರ್ ಇದ್ದರೆ ಮೆಡಿಸಿನ್ಸ್ ಇರುವುದಿಲ್ಲ ಮೆಡಿಸಿನ್ಸ್ ಇದ್ದರೆ ಡಾಕ್ಟರ್ ಇರುವುದಿಲ್ಲ. ಹೀಗೆ ಮೈಸೂರು ಜಿಲ್ಲೆಯಲ್ಲಿ ಎರಡು ಮೂರು ಕಡೆ ಮಾಡಿದ್ದಾರೆ. ಈ ಕುರಿತು ಸಿನ್ಸಿಯರ್ ಆಗಿ, ಸೀರಿಯಸ್ ಆಗಿ ಪ್ರಾಕ್ಟೀಸ್ ಮಾಡುವಂಥ, ಎಫ್‌ಕ್ಟಿಗೆ ತರುವಂಥ ಪದ್ಧತಿಯನ್ನು ಜಾರಿಗೆ ತಂದಿಲ್ಲ, ಬಹುಶಃ ಓಲ್ಡ್ ಈಸ್ಟ್ ಗೋಲ್ಡ್ ಅನ್ನುವ ಹಾಗೆ ಈ ಭಾರತೀಯ ವೈದ್ಯಕೀಯ ಪದ್ಧತಿಗಳು ಹಿಂದಿನ ಕಾಲದಲ್ಲಿ ಏನು ಇದ್ದವು ಅವನ್ನು ಜೀವಂತವಾಗಿಡುವ ಪದ್ಧತಿಯನ್ನು ಜಾರಿಗೆ ತರಬೇಕು.

ಶ್ರೀಮತಿ ನಫೀಸ ಫಜಲ್ : ಯಾವ ಮಂತ್ರಿಗಳೇ ಆಗಲಿ ಇಲ್ಲಿ ತಮಾಷೆ ಮಾಡಲಿಕ್ಕೆ ಬರುವುದಿಲ್ಲ, ಗಂಭೀರವಾಗಿ ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ ಈ ವೈದ್ಯಕೀಯ ಪದ್ಧತಿಯ ಅಭಿವೃದ್ಧಿಗಾಗಿ ಕನಿಷ್ಠ 30 ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಶಾಸಕರ ಬೇಡಿಕೆಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಇದರ ಜೊತೆಗೆ 5 ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮಂಜೂರು ಮಾಡಲು ವ್ಯವಸ್ಥೆ ಮಾಡಲಾಗಿದೆ, ನಾವೆಲ್ಲರೂ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ಸ್ ಪ್ರಸಿದ್ಧಿಗೊಳಿಸಲು ಎಲ್ಲಾ ತರಹದ ಕ್ರಮ ತೆಗೆದುಕೊಂಡು ಇದನ್ನು ಯಶಸ್ವಿಗೊಳಿಸಲು ಪ್ರಯತ್ನಿಸುತ್ತಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ : ಜಿಲ್ಲಾ ಆಸ್ಪತ್ರೆಗಳಲ್ಲಿ ಹೋಮಿಯೋಪತಿ, ಆಯುರ್ವೇದಿಕ್ ಪದ್ಧತಿಯಲ್ಲಿ ಹೊರ ರೋಗಿಗಳಿಗೆ ಸಂಬಂಧಿಸಿದಂತೆ, ಹಾಗೂ ಒಳರೋಗಿಗಳಿಗೆ ಬೆಡ್‌ಗಳನ್ನು ರಿಸರ್ವ್ ಮಾಡುವ ಪದ್ಧತಿಯನ್ನು ಎಲ್ಲಾ ಕಡೆ ಮಾಡುವಂತಹ ವ್ಯವಸ್ಥೆಯನ್ನು ಎಲ್ಲಾ ಕಡೆಗಳಲ್ಲೂ ಮಾಡಲಿಕ್ಕೆ ಸಾಧ್ಯ ಇದೆ. ಅಲೋಪತಿ ಸಿಸ್ಟಂನಲ್ಲಿ ಈ ಬಗ್ಗೆ ಸಾಕಷ್ಟು ಪ್ರೋತ್ಸಾಹ ಇದೆ ಎನ್ನುವುದನ್ನು ನಾನು ಖಂಡಿತ ಒಪ್ಪುವುದಿಲ್ಲ. ಈ ಹಿನ್ನೆಲೆಯಲ್ಲಿ ಕನಿಷ್ಠ ಕೆಲವು ಬೆಡ್‌ಗಳನ್ನು ರಿಸರ್ವ್ ಮಾಡುವ ವ್ಯವಸ್ಥೆ ಮಾಡುವುದು ಮತ್ತು ಹೊರ ರೋಗಿಗಳ ವಿಭಾಗ ತೆರೆಯಲಿಕ್ಕೆ ಸಾಧ್ಯವಾದರೆ ಹೋಮಿಯೋಪತಿ ಮತ್ತು ಆಯುರ್ವೇದಿಕ್ ಪದ್ಧತಿಗೆ ಅನುಕೂಲವಾಗುತ್ತದೆ ಎಂದು ಸಲಹೆಯನ್ನು ಕೊಡಲಿಚ್ಚಿಸುತ್ತೇವೆ.

ಶ್ರೀಮತಿ ನಫೀಸ ಫಜಲ್ : ಮೊನ್ನೆ ಕೂಡ ಇದಕ್ಕೆ ಉತ್ತರಿಸಿದ್ದೇನೆ. ಕೇಂದ್ರ ಸರ್ಕಾರದಿಂದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಐ.ಎಸ್.ಎಂ.ಪಿ ಭಾಗ ಪ್ರಾರಂಭ ಮಾಡಿದರೆ 35.00 ಲಕ್ಷ ರೂ.ಗಳನ್ನು ಕೊಡಲಾಗುತ್ತದೆ, ಅದಕ್ಕಾಗಿ ಈ ಐ.ಎಸ್.ಎಂ. ಸಿಸ್ಟಂ ಎಲ್ಲಿ ಇಲ್ಲ, ಅಲ್ಲಿ ಈ ಸೌಲಭ್ಯವನ್ನು ಉಪಯೋಗಿಸಲಿಕ್ಕೆ ಆರಂಭ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ವಿಚಿತ್ರವಾದ ಸಮಸ್ಯೆ ಇದೆ. ಯಾರ್ಯಾರು ಆಯುರ್ವೇದಿಕ್ ಪದವೀಧರರು ಇದ್ದಾರೆ ಅವರೆಲ್ಲಾ ಅಲೋಪತಿ ಪದ್ಧತಿಯನ್ನು ಪ್ರಾಕ್ಟೀಸ್ ಮಾಡಲಿಕ್ಕೆ ಪ್ರಾರಂಭಿಸಿದ್ದಾರೆ. ಏಕೆಂದರೆ ಜನರಿಗೆ ಕೂಡ ಈ ಪದ್ಧತಿಯಿಂದ ಕ್ವಿಕ್ ರಿಲೀಫ್ ಸಿಗುತ್ತದೆ ಎಂದು ಇವತ್ತಿನ ದಿವಸ, ಅಲೋಪತಿಯಲ್ಲಿ ಏನು ಇಂಜಿಕ್ಷನ್ಸ್, ಮೆಡಿಸಿನ್ಸ್, ಟ್ಯಾಬ್ಲೆಟ್ಸ್ ಕೊಡುತ್ತಾರೆ ಅದನ್ನು ಆಯುರ್ವೇದಿಕ್‌ನಲ್ಲಿ ಕೂಡ ಸಿದ್ಧಪಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಿಂದ ಆಯುರ್ವೇದಿಕ್ ಮತ್ತು ಅಲೋಪತಿ ವೈದ್ಯರ ನಡುವೆ ಸಂಘರ್ಷ ಆಗಿ ಅಲೋಪತಿಯವರು ಇದನ್ನು ಕ್ವ್ಯಾಕ್ಸ್ ಎಂದು ಕರೆಯುವ ಮಟ್ಟಕ್ಕೆ ಬಂದಿದ್ದಾರೆ. ಈ ದೃಷ್ಟಿಯಲ್ಲಿ ಆಯುರ್ವೇದಿಕ್ ವೈದ್ಯರಿಗೆ ಇಂಡಿಯನ್ ಮೆಡಿಸಿನ್ಸ್‌ನ ಶಾರ್ಟ್ ಟರ್ಮ್ ಕೋರ್ಸ್ ತರಬೇತಿ ನೀಡುವ ವ್ಯವಸ್ಥೆ ಮಾಡುತ್ತಾರೆಯೇ ಅಥವಾ ಆಯುರ್ವೇದಿಕ್ ವೈದ್ಯರು ಅಲೋಪತಿಕ್ ಪ್ರಾಕ್ಟೀಸ್ ಮಾಡಬಹುದು ಎಂಬುದರ ಬಗ್ಗೆ ಕ್ರಮ ಏನಾದರೂ ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ಹೇಳಬೇಕು.

ಶ್ರೀಮತಿ ನಫೀಸ ಫಜಲ್ : ಶ್ರೀ ಸುರೇಶ್ ಕುಮಾರ್‌ರವರು ಈ ಪ್ರಶ್ನೆಯನ್ನು ಹಾಕುತ್ತಿರುವುದರಿಂದ, I would like to inform that the Supreme Court has given its ruling clearly that ayurvedic doctors cannot practice allopathy and allopathic doctors cannot practice ayurveda. ಇದು ತಮಗೆ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಇನ್‌ಸ್ಪೈಟ್ ಆಫ್ ದಟ್ ಬೆಂಗಳೂರಿನ ಮೂಲೆ ಮೂಲೆಯಲ್ಲಿ ಈ ರೀತಿ ನಡೆಯುತ್ತಿದೆ, ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

Mr. Speaker : Give specific instance.

Sri S. Suresh Kumar : I am more surprised that the minister doesn't know.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರು ನಡೆಯುತ್ತಿರುವುದನ್ನು ಹೇಳುತ್ತಿದ್ದಾರೆಯೇ ಹೊರತು ನಡೆಯದಿರುವುದನ್ನು ಹೇಳಲಿಲ್ಲವಲ್ಲಾ.

ಅಧ್ಯಕ್ಷರು : ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಜನರಲ್ ಆಗಿ ಹೇಳಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಈಗ ಸುಪ್ರೀಂ ಕೋರ್ಟಿನವರು ನಿರ್ದೇಶನ ಕೊಟ್ಟಿರತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ನಮ್ಮ ಗಮನಕ್ಕೆ ತಂದರು. ಸುಪ್ರೀಂ ಕೋರ್ಟಿನವರು ನಿರ್ದೇಶನ ಕೊಟ್ಟಮೇಲೆ ರಾಜ್ಯ ಸರ್ಕಾರ ಕಾನೂನು ನಿಯಮಾವಳಿಗಳಿಗೆ ಏನಾದರೂ ತಿದ್ದುಪಡಿ ಮಾಡಿ ನಿರ್ದೇಶನ ಕೊಟ್ಟಿದ್ದೀರಾ ಅಥವಾ ಆದೇಶವನ್ನು ಏನಾದರೂ ಹೊರಡಿಸಿದ್ದೀರಾ? ಇದು ಕಾನೂನು ಬಾಹಿರವಾಗಿ ನೀವು ಪ್ರಾಕ್ಟೀಸ್ ಮಾಡುತ್ತಿರತಕ್ಕಂಥಾದ್ದು ಎಂದು ಅವರಿಗೆ ಹೇಳಿದ್ದೀರಾ? ಅಲೋಪಥಿಕ್ ಮತ್ತು ಆಯುರ್ವೇದದವರಿಗೆ ನಿರ್ದೇಶನ ಕೊಡುವುದು ಎಂದರೆ ಅದು ಆರ್ಡರ್ ರೂಪದಲ್ಲಿ ಇರಬೇಕು. ಸುಪ್ರೀಂ ಕೋರ್ಟಿನ ನಿರ್ದೇಶನವನ್ನು ಆಜ್ಞೆ ಮೂಲಕ ಸರ್ಕಾರ ಏನಾದರೂ ನಿರ್ದೇಶನಾಲಯಗಳಿಗೆ ಮತ್ತು ಆಸ್ಪತ್ರೆಗಳಿಗೆ ಕಳುಹಿಸಿ ಕೊಟ್ಟಿದ್ದಾರೆಯೆ? ಇದಕ್ಕೆ ಏನಾದರೂ ಪೀನಲ್ ಆಕ್ಷನ್ಸ್ ಮಾಡಿದ್ದೀರಾ? ಆ ಬಗ್ಗೆ ನಿಯಮಾವಳಿಗಳನ್ನು ರಚನೆ ಮಾಡಿ ಆದೇಶ ಹೊರಡಿಸಿದ್ದೀರಾ ಎಂದು ತಾವು ತಿಳಿಸಬೇಕು.

ಶ್ರೀಮತಿ ನಫೀಸ ಫಜಲ್ : ನಾನು ಈ ಖಾತೆಯ ಮಂತ್ರಿಯಾದ ಮೇಲೆ ಎಷ್ಟೋ ಡಾಕ್ಟರ್‌ಗಳು ನನ್ನ ಹತ್ತಿರ ಬಂದು "ಮ್ಯಾಡಮ್, ನಮಗೆ ಆಲೋಪಥಿ ಪದ್ಧತಿಯಲ್ಲಿ ಇಂಜೆಕ್ಷನ್ ಕೊಡುವುದಕ್ಕೆ, ಆಸ್ಟರಿನ್ ಮಾತ್ರೆ ಬರೆದುಕೊಡುಪುದಕ್ಕೂ ಅನುಮತಿ ಇಲ್ಲ. ನಮಗೆ ಏನಾದರೂ ವ್ಯವಸ್ಥೆ ಮಾಡಿಕೊಡಿ" ಎಂದು ಅವರು ಕೇಳಿದಾಗ, ಆಗ ನಾಯಕ್ ಎಂಬ ಹೆಲ್ತ್ ಸೆಕ್ರೆಟರಿಯವರು ಇದ್ದರು. ಇದಕ್ಕೆ ಏನಾದರೂ ಮಾಡಬಹುದೇ ಎಂದು ನಾನು ಅವರನ್ನು ಕೇಳಿದಾಗ ಅವರು ಹೇಳಿದರು – "The Supreme Court has given a very strict order. We cannot intervene in this." The Court's decision - the Ayurvedic and Allopathy practitioners including chemists are aware of this law. ಏಕೆಂದರೆ, ಮುಂಚೆ ಜಾಂಡೀಸ್ ಬಂದರೆ ಎಲ್ಲಾ ಆಲೋಪಥಿ ಡಾಕ್ಟರ್‌ಗಳೂ ಕೂಡ ಲಿವ್–52 ಎನ್ನುವ ಔಷಧಿಯನ್ನು ಬರೆದುಕೊಡುತ್ತಿದ್ದರು. ಈಗ ಅವರಿಗೂ ಕೂಡ ಹೀಗೆ ಬರೆದುಕೊಡುವುದಕ್ಕೆ ಅನುಮತಿ ಇಲ್ಲ. ಈಗ – even allopathic doctors cannot prescribe the simple Liv-52 for patients. That is the way the judgement has come. ಇದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು : ಇದು ಕೊನೆ ಉಪಪ್ರಶ್ನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಈ judgement cannot become an order. Based on the judgement of the Supreme Court, what the government has done? Whether the Government has issued an order? ಆ ರೀತಿ ಪ್ರಾಕ್ಟೀಸ್ ಮಾಡಿದವರಿಗೆ ಇಂತಹ ಒಂದು ಶಿಕ್ಷೆಯಾಗುತ್ತದೆ, ಇವರನ್ನು ಹಿಡಿದುಕೊಟ್ಟವರಿಗೆ ನಿಯಮಾವಳಿ ಪ್ರಕಾರ ಈ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನೀವು ಏನಾದರೂ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ಮಾಡಿ ರಾಜ್ಯ ಸರ್ಕಾರದಿಂದ ಆದೇಶವನ್ನು ಹೊರಡಿಸಿದ್ದೀರಾ? ಬರೇ ಸುಪ್ರೀಂ ಕೋರ್ಟಿನ ಆದೇಶ ಎಂದು ಹೇಳಿದರೆ ಅದನ್ನು ಯಾರೂ ಕೂಡ ಪಾಲನೆ ಮಾಡುವುದಿಲ್ಲ.

ಶ್ರೀಮತಿ ನಫೀಸ ಫಜಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಹಾಕಬೇಕು. ಇದಕ್ಕೆಲ್ಲಾ ಯಾವ ಮಂತ್ರಿಗಳ ಹತ್ತಿರವೂ ಮಾಹಿತಿ ಇರುವುದಿಲ್ಲ. ನನ್ನ ಹತ್ತಿರ ಎಷ್ಟು ಮಾಹಿತಿ ಇತ್ತು ಅಷ್ಟನ್ನು ನಾನು ಕೊಟ್ಟಿದ್ದೇನೆ. ಅವರು ಬೇರೆ ಪ್ರಶ್ನೆಯನ್ನು ಹಾಕಿದರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ : ಈ ಮೂರು ಕ್ಷೇತ್ರಗಳಲ್ಲೂ ಪ್ರಾಕ್ಟೀಸ್ ಮಾಡತಕ್ಕಂಥ ವೈದ್ಯರುಗಳಲ್ಲಿ ಬಹಳಷ್ಟು ಮಂದಿ ಫೇಕ್ ಇದ್ದಾರೆ. They are not registered legally. I can prove it. Most of the people have not registered. They have exhibited their certificates in their own shops. ಇದರ ಬಗ್ಗೆ ಇಲಾಖೆಯವರು ಏನು ಸ್ಪೆಪ್ಸ್ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಿ? ಅದನ್ನು ತಡೆಗಟ್ಟಲಿಕ್ಕೆ ಏನು ಮಾಡಿದ್ದೀರಿ ಎನ್ನತಕ್ಕಂಥಾದ್ದು ಒಂದು. ಎರಡನೆಯದು, ಈ ಆಯುರ್ವೇದಿಕ್ ಪ್ರಾಕ್ಟೀಸ್ ಏನು ಮಾಡುತ್ತಿದ್ದಾರೆ, ಇವರದ್ದು ಒಂದು ದೊಡ್ಡ ಕತೆ ಯಾವುದೋ ಮೀನನ್ನು ತಿಂದರೆ ಕಾಯಿಲೆ ವಾಸಿಯಾಗುತ್ತದೆ ಎಂದು ಮೀನಿನ ಜಾಹೀರಾತು ತೋರಿಸಿ ಅವನು ಪ್ರಾಕ್ಟೀಸ್ ಮಾಡುತ್ತಾನೆ. ಆದೇನು ಫೇಕ್ ಹೌದೇ

ಅಲ್ಲವೇ ಎಂದು ನೋಡಿದ್ದೀರಾ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಬಾಗಲಕೋಟೆಯಲ್ಲಿ ಒಬ್ಬರು ಬುಲೆಟ್ ಸರ್ಜನ್ ಮಾಡುತ್ತೇನೆ ಎಂದು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿದ್ದಾರೆ. ಅವರೇನೋ ಬರೀ ಮೈ ಮುಟ್ಟಿದರೆ ಹುಶಾರಾಗಿ ಬಿಡುತ್ತಾರೆ ಎಂದು ಹೇಳುತ್ತಾರೆ; ಇದೆಲ್ಲಾ ಪ್ರಾಕ್ಟೀಸ್ ಮಾಡುವುದು ಬೋಗಸ್. ಇದೆಲ್ಲವನ್ನು ಪ್ರಿವೆಂಟ್ ಮಾಡುವುದಕ್ಕೆ ಇಲಾಖೆಯವರು ಏನೇನು ಕ್ರಮ ತೆಗೆದು ಕೊಂಡಿದ್ದೀರಿ? ಇದರ ಬಗ್ಗೆ ಲೀಗಲ್ ಸ್ಟೆಪ್ಸ್ ಏನು ತೆಗೆದುಕೊಂಡಿದ್ದೀರಿ? ಸುಪ್ರೀಂ ಕೋರ್ಟ್ ಆರ್ಡರ್ ಬಂದಿರುವುದು ನಿಜ. ಆದರೆ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಇದನ್ನು ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ ಎಂದು ಹೇಳಬೇಕು. ಇದನ್ನು ಜಾರಿಗೆ ತಂದು ಇಂತಹ ಫೇಕ್ ಸಿಸ್ಟಮ್‌ನ್ನು, ಡ್ಯೂಬಿಯಸ್ ಸಿಸ್ಟಮ್‌ನ್ನು ಯಾವಾಗ ನಿಲ್ಲಿಸುತ್ತೀರಿ?

ಶ್ರೀಮತಿ ನಫೀಸ ಫಜಲ್ : ಅಧ್ಯಕ್ಷರೇ, ಇದು quackery ಇರುವುದು ಎಲ್ಲರಿಗೂ ಗೊತ್ತಿದೆ. ಈಗ ಮಾನ್ಯ ಸದಸ್ಯರು ಕೇಳುತ್ತಿರುವುದು ವೈದ್ಯಕೀಯ ಮಂತ್ರಿಗಳಿಗೆ ಸಂಬಂಧಪಟ್ಟಂಥ ವಿಷಯ. ಅದಕ್ಕಾಗಿ ಆ ಮಂತ್ರಿಗಳಿಗೆ ಅವರು ಬೇರೆ ತರಹ ಪ್ರಶ್ನೆಯನ್ನು ಕೇಳಿದರೆ ಒಳ್ಳೆಯದು.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಗುರುಸ್ವಾಮಿಯವರೇ, ಇದು ಶ್ರೀ ಕಾಗೋಡು ತಿಮ್ಮಪ್ಪ ಅವರಿಗೆ ಸಂಬಂಧಪಟ್ಟದ್ದು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎ.ಎಸ್. ಗುರುಸ್ವಾಮಿ : I have seen ಆಲೋಪಥಿ, ಹೋಮಿಯೋಪಥಿ ಎಂತಲೇ ಅವರು ಬೋರ್ಡುಗಳನ್ನು ಹಾಕಿಕೊಂಡಿರುವುದು. ತಾವು ಬೇಕಾದರೆ ನೋಡಿ.

ಅಧ್ಯಕ್ಷರು : ಆಯಿತು ಬಿಡಿ.

ಶ್ರೀಮತಿ ನಫೀಸ ಫಜಲ್ : ಮಾನ್ಯ ಅಧ್ಯಕ್ಷರೇ, ನಾನು ಬರುವುದಕ್ಕೆ ಮುಂಚೆ ಅವರು ಹೇಳಿದ್ದರು. ಮ್ಯಾಡಮ್, ನಾನು ನಿಮಗೆ ಕನ್‌ಫ್ಯೂಸ್ ಮಾಡಿಬಿಡ್ತೀನಿ ಎಂದು ಅವರು ಏನು ಹೇಳಿದ್ದರು ಅದಕ್ಕೆ ಈಗ ಪ್ರಯತ್ನ ಪಡುತ್ತಿದ್ದಾರೆ. ಅವರು ಹೇಳಿದ ಪ್ರಕಾರ ಅದನ್ನೇ ಮಾಡುತ್ತಿದ್ದಾರೆ. ಆರೇಳು ಉಪಪ್ರಶ್ನೆಗಳು ಆದವು, ಸಾಕು.

ಅಧ್ಯಕ್ಷರು : ನೋಡಿ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಯಾವ ರೀತಿ ತಯಾರಾಗಿದ್ದಾರೆ. ವೆರಿಗುಡ್. ಮುಂದಿನ ಪ್ರಶ್ನೆ.....

ಶ್ರೀಮತಿ ನಫೀಸ ಫಜಲ್ : ನಾನು ಇನ್ನು ಎಷ್ಟು ಉತ್ತರ ಕೊಡಬೇಕು?

ಶ್ರೀ ಆರಗ ಜ್ಞಾನೇಂದ್ರ : ಒಟ್ಟಾರೆ ಮಾನ್ಯ ಮಂತ್ರಿಗಳನ್ನು ಯಾರೂ ಕೂಡ ಕನ್‌ಫ್ಯೂಸ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಈ ಸದನಕ್ಕೆ ಗೊತ್ತಾಯಿತು.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಚಿಕ್ಕ ಪ್ರಶ್ನೆ. ನಾನು out of the subject ಅವರ ಹತ್ತಿರ ಹೇಳಿದ್ದು. 'ಏನಮ್ಮ, ನನ್ನ ಕೆಲಸ ಒಂದೂ ನೀವು ಮಾಡುವುದಿಲ್ಲ. ಇವತ್ತು ನೋಡಿ ನಿಮ್ಮನ್ನು ಕನ್‌ಫ್ಯೂಸ್ ಮಾಡುತ್ತೇನೆ ಎಂದು ನಾನು ತಮಾಷೆಗೆ ಹೇಳಿದರೆ ಅದನ್ನೇ ಇವರು ಸದನದಲ್ಲಿ ಹೇಳಿ ಬಿಡುವುದಾ?

ನಗು

ಅಧ್ಯಕ್ಷರು : ಆಯಿತು ಬಿಡಿ. ಎಲ್ಲಾ ಪುರುಷ ಮಂತ್ರಿಗಳಿಗಿಂತ ಅವರೇ ಚೆನ್ನಾಗಿ ಉತ್ತರ ಕೊಡುವುದಕ್ಕೆ ತಯಾರಾಗಿದ್ದಾರೆ, ಸುಮ್ಮನಿರಿ.